- ಸರದಿ ಸಾಲಿನಲ್ಲಿ ಹೇಳಿಕೆ ಪಡೆಯಲು ಹೋಗುವಾಗ ತಮ್ಮ ಸೇವಾ ಪಾವತಿಯನ್ನು ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ತಮ್ಮ ಜೊತೆ ಕೊಂಡೊಯ್ಯುವಂತಿಲ್ಲ.
- ಭಾರತೀಯ ವಸ್ತ್ರಸಂಹಿತೆಯ ಪ್ರಕಾರ ಬಂದವರಿಗೆ ಮಾತ್ರ ದರ್ಶನ (ಹೇಳಿಕೆ) ಸೇವೆಗೆ ಅವಕಾಶವಿದೆ.
- ಭಕ್ತಾದಿಗಳ ಬೆಲೆಬಾಳುವ ವಸ್ತುಗಳನ್ನು (ಮೊಬೈಲ್, ಪರ್ಸ್, ಬ್ಯಾಗ್ ಇತ್ಯಾದಿ) ಸುರಕ್ಷಿತವಾಗಿ ಇಡಲು ಲಾಕರ್ ಸೌಲಭ್ಯವಿದೆ.
- ದೇವಾಲಯದಲ್ಲಿ ಫೋಟೋ ತೆಗೆಯುವುದು, ವಿಡಿಯೋ ಮಾಡುವುದು, ವಿಡಿಯೋ ಕಾಲಿಂಗ್ ಮಾಡುವುದನ್ನು ನಿರ್ಭಂಧಿಸಲಾಗಿದೆ.
- ಸೇವಾರ್ಥಿಗಳು ಕರ್ತವ್ಯನಿರತ ಸಿಬ್ಬಂದಿಗಳೊಡನೆ ಯಾವುದೇ ವಾದ ಮಾಡುವಂತಿಲ್ಲ.
- ಭಕ್ತಾದಿಗಳು ತಾವು ಸೇವೆಯನ್ನು ಬುಕಿಂಗ್ ಮಾಡಿಕೊಂಡ ದಿನದಂದೇ ಸೇವೆಯನ್ನು ಪಡೆದುಕೊಳ್ಳತಕ್ಕದ್ದು. ಬುಕಿಂಗ್ ಮಾಡಿಕೊಂಡ ದಿನಾಂಕವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಭಕ್ತಾದಿಗಳು ಬುಕಿಂಗ್ ಮಾಡಿಕೊಂಡ ದಿನಾಂಕದಂದು ಆಗಮಿಸದೇ ಇದ್ದಲ್ಲಿ ಸೇವಾದಾರರ ಕುಟುಂಬದ ಹೆಸರಿನಲ್ಲಿ ದೇವರಿಗೆ ವಿಶೇಷ ಪೂಜಾ ಸೇವೆ ಸಲ್ಲಿಸಿ ಪ್ರಸಾದ ಕಳುಹಿಸಲಾಗುವುದು.
- ದರ್ಶನ/ಹೇಳಿಕೆ ಸೇವಾ ದಿನದ ಹೊರತಾಗಿಯೂ ದೇವರ ಸನ್ನಿಧಿಯಲ್ಲಿ ಸುವರ್ಣ ಕವಚ ಅಲಂಕಾರ, ಪಾದುಕಾ ಪೂಜೆ, ಮಹಾಪೂಜೆ, ಹೂವಿನ ಪೂಜೆ ಸೇವೆಗಳನ್ನು ತಮ್ಮ ಕುಟುಂಬ ಶ್ರೇಯೋಭಿವೃದ್ದಿಯ ಸಂಕಲ್ಪದೊಂದಿಗೆ (ಹುಟ್ಟು ಹಬ್ಬ, ಚೌಲ, ಗೃಹಪ್ರವೇಶ, ಉಪನಯನ, ವಿವಾಹಾದಿ ವಿಶೇಷ ಕಾರ್ಯಗಳ ನಿಮಿತ್ತವಾಗಿಯೂ) ನಡೆಸಬಹುದಾಗಿದೆ.
- ನಿಮ್ಮ ಸಹಕಾರ ಹಾಗೂ ಬೆಂಬಲಕ್ಕೆ ನಾವು ಹೃತ್ಪೂರ್ವಕವಾಗಿ ಕೃತಜ್ಞರಾಗಿದ್ದೇವೆ.